1. ನಿಲುವಳಿ ಸೂಚನೆ ಮಂಡನೆಗೆ ಕೋರಿಕೆ :

ವಿಷಯ: ಲೋಕಾಯುಕ್ತ ಅವರು ದಿನಾಂಕ: 27–7–2011 ರಂದು ಸಲ್ಲಿಸಿದ ಅಂತಿಮ ವರದಿ ಬಗ್ಗೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ನಾನು ನಿಯಮ 60ರಡಿಯಲ್ಲಿ ಚರ್ಚಿಸಲು ಒಂದು ನೋಟೀಸ್ ಕೊಟ್ಟಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಈಗ question hour ಇದೆ.

ಶ್ರೀ ಸಿದ್ದರಾಮಯ್ಯ : Question hour ಗಿಂತ ಮುಂಚಿತವಾಗಿ ಇದನ್ನು ತೆಗೆದುಕೊಳ್ಳಬೇಕಾಗಿದೆ. ಏಕೆಂದರೆ, ಜಗದೀಶ್‌ಶೆಟ್ಟರ್‌ರವರೆ, it is very important. ನಾನು submission ಮಾಡಿದ ಮೇಲೆ how important it is ಎಂದು ಹೇಳಿದ ಮೇಲೆ you support immediately. ನಾನು ನಿಯಮ 60ರಡಿಯಲ್ಲಿ ಒಂದು Adjournment Motion notice regarding Lokayukta final report submitted on 27.7.2011 ಕೊಟ್ಟಿದ್ದೇನೆ. ಲೋಕಾಯುಕ್ತರು ರಿಪೋರ್ಟ್ ಕೊಟ್ಟು ಈಗಾಗಲೇ 4 ತಿಂಗಳು ಮುಗಿದು 5ನೇ ತಿಂಗಳು ಕಳೆಯುತ್ತಿದೆ. ಲೋಕಾಯುಕ್ತರು ವರದಿ ಕೊಟ್ಟ ಮೇಲೆ 3 ತಿಂಗಳಲ್ಲಿ ಅಥವಾ 90 days ನಲ್ಲಿ ಸರ್ಕಾರ ಏನು ಕ್ರಮ ತೆಗೆದು ಕೊಂಡಿದೆ ಎನ್ನುವುದನ್ನು ಲೋಕಾಯುಕ್ತಕ್ಕೆ ತಿಳಿಸಬೇಕೆಂದು ಲೋಕಾಯುಕ್ತ ವರದಿಯಲ್ಲಿ ಹೇಳುತ್ತಾರೆ. ಜೊತೆಗೆ, ಲೋಕಾಯುಕ್ತರು 2 ರಿಪೋರ್ಟ್ ಕೊಟ್ಟಿದ್ದಾರೆ. Illegal mining ಅಕ್ರಮ ಗಣಿಗಾರಿಕೆ illicit export of iron ore ಬಗ್ಗೆ ವರದಿ ಕೊಟ್ಟಿದ್ದಾರೆ. 4 ಆದೇಶಗಳಲ್ಲಿ ಅವರಿಗೆ refer ಮಾಡಿದ್ದಾರೆ. 2000ನೇ ಇಸವಿಯಿಂದ ಡಿಸೆಂಬರ್ 2010ರವರೆಗೆ ತನಿಖೆ ಮಾಡಿ illegal mining ಯಾವ್ಯಾವ ರೀತಿ ನಡೆದಿದೆ? ರಾಜ್ಯದ ಬೊಕ್ಕಸಕ್ಕೆ ಎಷ್ಟು ನಷ್ಟವಾಗಿದೆ? ಇದರಲ್ಲಿ ಯಾರ್ಯಾರು ರಾಜಕಾರಣಿಗಳು ಶಾಮೀಲಾಗಿದ್ದಾರೆ? ಯಾರ್ಯಾರು ಅಧಿಕಾರಿಗಳು ಶಾಮೀಲಾಗಿದ್ದಾರೆ, ಇದನ್ನು ತಡೆಗಟ್ಟಲಿಕ್ಕೆ ಏನು ಮಾಡಬೇಕು ಮತ್ತು ಇನ್ನೇನು ಶಿಫಾರಸ್ಸುಗಳನ್ನು ಮಾಡಬೇಕೆನ್ನುವ ಬಗ್ಗೆ ಎಲ್ಲಾ terms of reference ಹಾಕಿ 4 ಆದೇಶಗಳಲ್ಲಿ ಕೊಟ್ಟಿದ್ದಾರೆ. ದಿನಾಂಕ: 12.3.2002 ರಲ್ಲಿ ಒಂದು ಆದೇಶ. ದಿನಾಂಕ: 9.9.2008ರಲ್ಲಿ

ಒಂದು ಆದೇಶ, ದಿನಾಂಕ: 24.12.2008ರಲ್ಲಿ ಒಂದು ಆದೇಶ ಹೊರಡಿಸಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಸಭಾಧ್ಯಕ್ಷರೆ, ಅವರು detail ಆಗಿ ಹೇಳುವುದಾದರೆ ನನ್ನದೊಂದು submission ಇದೆ. ಮೊದಲು question hour ತೆಗೆದುಕೊಳ್ಳಿ.

ಶ್ರೀ ಸಿದ್ದರಾಮಯ್ಯ : ಕೊನೆಯ ಆದೇಶವನ್ನು 2010ರಲ್ಲಿ ಹೊರಡಿಸಿದ್ದಾರೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಮೊದಲು Question hour ತೆಗೆದುಕೊಳ್ಳಿ. ಆಮೇಲೆ ಅವರು Submission ಮಾಡಲಿ. ಸರ್ಕಾರವು ಉತ್ತರ ಕೊಡುತ್ತದೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ನಾನು convince ಮಾಡುವುದಕ್ಕೆ ಬಿಡದಿದ್ದರೆ ಹೇಗೆ? Please permit me to make a preliminary submission. If you are convinced, allow me for discussion. If you are not convinced, then you take a decision.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಮೊದಲು question hour ತೆಗೆದುಕೊಳ್ಳಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಮೊನ್ನೆಯೂ adjournment motion ತಂದಾಗ ...

(ಗೊಂದಲ)

ಶ್ರೀ ಸಿದ್ದರಾಮಯ್ಯ : Nobody can prevent me to make preliminary submission. That is why Rule 60 is there.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : Preliminary submission ಮಾಡುವುದಕ್ಕೆ ತೊಂದರೆ ಏನೂ ಇಲ್ಲ. Preliminary submission ನಲ್ಲಿ details ...

(ಗೊಂದಲ)

ಶ್ರೀ ಸಿದ್ದರಾಮಯ್ಯ : ಇವರು ವಿರೋಧ ಪಕ್ಷದಲ್ಲಿದ್ದಾಗ ನಾನು ಕುಳಿತು ನೋಡಿದ್ದೇನೆ. ಎಲ್ಲವನ್ನೂ ತೆಗೆಸೋಣವೇ?

ಶ್ರೀ ಜಗದೀಶ್ ಶೆಟ್ಟರ್ : ತೆಗೆಸಿರಿ. ನಾನು ಯಾವ ರೀತಿ ನಡೆದುಕೊಂಡೆವು ಎಂಬುದನ್ನು ತೆಗೆಸಿ.

ಶ್ರೀ ಸಿದ್ದರಾಮಯ್ಯ : ಇಲ್ಲಿ ನಾವು ಅವರ ರೀತಿ ನಡೆದುಕೊಳ್ಳ ಬೇಕೆಂದೇನೂ ಇಲ್ಲ. Rule 60 ಏನು ಹೇಳುತ್ತದೋ ಆ ರೀತಿ ನಾನು ನಡೆದುಕೊಳ್ಳುತ್ತೇನಷ್ಟೆ. Rule ಹೇಗೆ ಹೇಳುತ್ತದೋ ಹಾಗೆ ನಡೆದುಕೊಳ್ಳುತ್ತೇನೆ. That is how I behave. That is my attitude. ಮಾನ್ಯ ಅಧ್ಯಕ್ಷರೆ, ನಾನು ಇಲ್ಲಿ 30 ವರ್ಷಗಳಿಂದ ಇದ್ದೇನೆ. ನನಗೆ ವಿರೋಧ ಪಕ್ಷದಲ್ಲಿ ಅನುಭವ ಕಡಿಮೆ ಆಗಿತ್ತು. ಈಗ ಇಲ್ಲಿಗೆ ಬಂದಮೇಲೆ ನಿಮ್ಮಿಂದ ಅನುಭವ ಸ್ವಲ್ಪ ಜಾಸ್ತಿಯಾಗಿದೆ. ನಾನು ಯಾವಾಗಲೂ ruling party ಯಲ್ಲಿಯೇ ಇರುತ್ತಿದ್ದೆ, ಹಾಗಾಗಿ ಅಷ್ಟು ತೊಂದರೆ ಇರಲಿಲ್ಲ. ಈಗ ವಿರೋಧ ಪಕ್ಷಕ್ಕೆ ಬಂದು ಈಗ ಸ್ವಲ್ಪ ಅನುಭವ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಬಸವರಾಜ ಎಸ್. ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) : ನೀವು ವಿರೋಧ ಪಕ್ಷಕ್ಕೆ ಹೋದ ತಕ್ಷಣವೇ ಸರಿಯಾಗಿ ಅದನ್ನು ಕರಗತ ಮಾಡಿಕೊಂಡಿದ್ದೀರಿ. ಕಲಿಯುವಂಥ ಪ್ರಶ್ನೆ ಇಲ್ಲ. ನಮಗೆಲ್ಲ ಕಲಿಸುತ್ತಿದ್ದೀರಿ.

ಶ್ರೀ ಸಿದ್ದರಾಮಯ್ಯ : ನೀವಲ್ಲ, ಅಧ್ಯಕ್ಷರು ಆ certificate ಕೊಡಬೇಕು!

ಅಧ್ಯಕ್ಷರು : ನಿಮಗೆ ಈಗಲೇ ಕೊಟ್ಟುಬಿಡುತ್ತೇನೆ. ನೀವು ಒಳ್ಳೆಯ Opposition Party Leader ಆಗಿ ಚೆನ್ನಾಗಿ ಮಾಡಿದ್ದೀರಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಇದು ಅತ್ಯಂತ ಪ್ರಮುಖ ವಾದದ್ದು. ಮೊದಲನೇ ರಿಪೋರ್ಟ್ ಅನ್ನು 18ನೇ ಡಿಸೆಂಬರ್ 2008ರಲ್ಲಿ ಕೊಟ್ಟಿದ್ದಾರೆ, that is report No.1. Report No.2 is final report. ಅದನ್ನು ದಿನಾಂಕ:27.7.2011ರಂದು ಕೊಟ್ಟಿದ್ದಾರೆ. ಎರಡನೇ ರಿಪೋರ್ಟ್‌ನಲ್ಲಿ ಲೋಕಾಯುಕ್ತರು ನಾನು ಮೊದಲನೇ ರಿಪೋರ್ಟ್ ಕೊಟ್ಟಿರುವುದನ್ನೇ ಸರಿಯಾಗಿ ಮಾಡಿಲ್ಲ ಎಂದು ಉಲ್ಲೇಖ ಮಾಡಿದ್ದಾರೆ. ಅದನ್ನು ಸರಿಯಾಗಿ ಜಾರಿಗೆ ಕೊಟ್ಟಿಲ್ಲ, ನನ್ನ ಶಿಫಾರಸ್ಸುಗಳನ್ನು ಜಾರಿ ಮಾಡಿಲ್ಲ, ಕೆಲವರ ಮೇಲೆ criminal case ಹಾಕುವುದು ಬಿಟ್ಟರೆ my recommendations were not at all seriously considered by the Government and they have not been implemented ಎಂದು December 18ರಂದು ವರದಿ ಕೊಟ್ಟಿದ್ದಾರೆ. ಅಂದಿಗೂ ಇಂದಿಗೂ ಎಷ್ಟು ವರ್ಷಗಳಾಗಿದೆ ಎಂದರೆ nearly

three years ಆಗಿದೆ. Three years the Government kept the matter and the recommendations made by hon'ble Lokayukta. ಜನರಿಗೆ ಏನು ಅನಿಸುತ್ತಿದೆ ಎಂದರೆ, ಸರ್ಕಾರ ಯಾರಿಗೋ ರಕ್ಷಣೆ ಮಾಡುವುದ ಕ್ಕೋಸ್ಕರ ಇವರೇನೂ ಕ್ರಮ ತೆಗೆದುಕೊಂಡಿಲ್ಲ ಎನ್ನುವುದು clearly, prima facie it is established. ನಾನು ಮುಂದುವರಿದು ಏನು ಹೇಳುತ್ತೇನೆಂದರೆ, ಅವರ ಎರಡನೇ ರಿಪೋರ್ಟ್‌ನಲ್ಲಿ ಏನು ಹೇಳುತ್ತಾರೆಂದರೆ, 2008ರ ಡಿಸೆಂಬರ್‌ನಲ್ಲಿ ರಿಪೋರ್ಟ್ ಕೊಟ್ಟಮೇಲೆ illegal mining ಜಾಸ್ತಿಯಾಗಿದೆ. It is not my report, it is the report of the Lokayukta, in his second report. ಬೇಲೇಕೇರಿ ಬಂದರಿನಲ್ಲಿ ಫೆಬ್ರವರಿ 2010ರಲ್ಲಿ 8 ಲಕ್ಷ ಟನ್ ಅದಿರನ್ನು seize ಮಾಡಿದೆವು, ಅದೇ ವರ್ಷದ ಜೂನ್ ತಿಂಗಳ 2ನೇ ತಾರೀಕಿಗೆ ಸುಮಾರು 6 ಲಕ್ಷ 10 ಸಾವಿರ ಮೆಟ್ರಿಕ್ ಟನ್ ಅದಿರು ಕದ್ದುಹೋಯಿತು, ಕದ್ದುಬಿಟ್ಟರು.

ಅಧ್ಯಕ್ಷರು : ವಿವರಗಳು ಬೇಡ.

ಶ್ರೀ ಸಿದ್ದರಾಮಯ್ಯ : ಇದು ವಿವರ ಅಲ್ಲ. It is only facts. ನಾನು ನಿಮ್ಮನ್ನು preliminary submission ನಲ್ಲಿ convince ಮಾಡಲು move ಮಾಡಿದ್ದೇನೆ. permission ಕೊಡಿ ಎಂದರೆ ಕೊಡುತ್ತೀರಾ? I want you to convince. I hope that you are convinced. ಈ ರಾಜ್ಯದ 2 ಕೋಟಿ 98 ಲಕ್ಷ 60 ಸಾವಿರ ಮೆಟ್ರಿಕ್ ಟನ್ ಕಬ್ಬಿಣದ ಅದಿರು illicit export ಆಗಿದೆ. It comes to about Rs.12,222 crore. ಆಮೇಲೆ invoice ಕಡಿಮೆ ಆಗಿರುವುದು. 2222 ಕೋಟಿ ರೂಪಾಯಿಗಳು.

ಅಧ್ಯಕ್ಷರು : ಮಾನ್ಯ ಬಸವರಾಜ ಬೊಮ್ಮಾಯಿಯವರು point of order ಎಂದು ಹೇಳುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ : Royalty ಕಟ್ಟಿರುವುದು 1680 ಕೋಟಿ ರೂಪಾಯಿಗಳು ಈ ರಾಜ್ಯದ ಬೊಕ್ಕಸಕ್ಕೆ ಅನ್ಯಾಯವಾಗಿರುವುದು, final report ನಲ್ಲಿ ಹೇಳಿರುವುದು 16,850 ಕೋಟಿ ರೂಪಾಯಿ.

ಅಧ್ಯಕ್ಷರು : ಒಂದು ನಿಮಿಷ, point of order ಎಂದು ಹೇಳುತ್ತಾರೆ.

ಶ್ರೀ ಸಿದ್ದರಾಮಯ್ಯ : JMC Company ಆಗಿದೆ,

ಅಧ್ಯಕ್ಷರು : ಒಂದ್ನಿಮಿಷ, ಅವರು ಏನು ಹೇಳುತ್ತಾರೆ ಎನ್ನುವುದನ್ನು ಕೇಳಿ.

ಶ್ರೀ ಸಿದ್ದರಾಮಯ್ಯ : Preliminary submission ಗೆ ಬಸವರಾಜ ಬೊಮ್ಮಾಯಿಯವರು ಅಡ್ಡ ಬಂದರೆ, how can I complete my Preliminary submission?

ಶ್ರೀ ಬಸವರಾಜ ಎಸ್. ಬೊಮ್ಮಾಯಿ : ನಾನು ಅಡ್ಡ ಬರುತ್ತಿಲ್ಲ. ಲೋಕಾಯುಕ್ತ ರಿಪೋರ್ಟ್ ಒಂದು, ಎರಡರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ, ಏನಿಲ್ಲ ಅದರ ಬಗ್ಗೆ ಚರ್ಚೆ ಮಾಡಲು Rule 60 ಅಡಿಯಲ್ಲಿ ಏನು notice ಕೊಟ್ಟಿದ್ದಾರೆ ಅದರ ಬಗ್ಗೆ ಸಂಪೂರ್ಣವಾಗಿ ಚರ್ಚೆ ಮಾಡುವುದಕ್ಕೆ ಸರ್ಕಾರ ಸಿದ್ಧವಿದೆ. ಆದರೆ, ಪ್ರಶ್ನೆ ಏನೆಂದರೆ, Rule 60ರಲ್ಲಿ ಇದು ಬರುವುದಿಲ್ಲ. ಏಕೆಂದರೆ, ವರದಿ ಕೊಟ್ಟು ಎಷ್ಟು ದಿವಸಗಳಾಗಿವೆ. ಸದನ ನಡೆದು ಇಷ್ಟು ದಿವಸಗಳಾದ ಮೇಲೆ ಇವತ್ತು adjournment motion ತಮ್ಮ ಮುಂದೆ ಬಂದಿದೆ. ಆ ಹಿನ್ನೆಲೆಯಲ್ಲಿ ಇದನ್ನು Rule 69ಗೆ convert ಮಾಡಿ. ನಾವು ಅಕ್ರಮ ಗಣಿಗಾರಿಕೆ, ಲೋಕಾಯುಕ್ತ ವರದಿ, ನಾವು ತೆಗೆದುಕೊಂಡಂತ ನಿರ್ಣಯ, ಕ್ರಮಗಳು ಮತ್ತು ಏನು ನಡೆದಿದೆ, ಯಾವ ಕಾಲಕ್ಕೆ ನಡೆದಿದೆ, ರಾಜಕಾರಣಿಗಳು ಇರಬಹುದು, ಅಧಿಕಾರಿಗಳು ಇರಬಹುದು, ಅವರ ಮೇಲೆ ಏನು ಕ್ರಮ ಜರುಗಿಸಿದ್ದೇವೆ ಎನ್ನುವ ಬಗ್ಗೆ ಸಂಪೂರ್ಣವಾಗಿ ಸರ್ಕಾರ ಉತ್ತರ ಕೊಡುವುದಕ್ಕೆ ಸಿದ್ಧವಿದೆ, ಚರ್ಚೆ ಮಾಡುವುದಕ್ಕೂ ಸಿದ್ಧವಿದೆ. ಆ ಹಿನ್ನೆಲೆಯಲ್ಲಿ ಇದನ್ನು Rule 69ಗೆ convert ಮಾಡಬೇಕು. ಇನ್ನೂ ಬಹಳಷ್ಟು ಗಮನ ಸೆಳೆಯುವ ಸೂಚನೆಗಳಿವೆ, ಪ್ರಶ್ನೋತ್ತರ ಇದೆ, ಕೃಷ್ಣಾ ನದಿ ತೀರ್ಪಿನ ಬಗ್ಗೆ, ಹೀಗೆ ಹತ್ತು ಹಲವಾರು ಮಹತ್ವದ ವಿಚಾರಗಳಿರುವುದರಿಂದ ತಾವು ದಯವಿಟ್ಟು ಇದನ್ನು ಗಮನಿಸಿ ಕೂಡಲೆ Rule 69ಗೆ convert ಮಾಡಿ ಇವತ್ತೇ ಅವರಿಗೆ ಅವಕಾಶ ಕೊಡಿ, ಇವತ್ತೇ ನಾವು ಉತ್ತರ ಕೊಡಲಿಕ್ಕೆ ಸಿದ್ಧರಿದ್ದೇವೆ.

ಶ್ರೀ ಸಿದ್ದರಾಮಯ್ಯ : Rule 69ಗೆ convert ಮಾಡಬೇಕೇ ಬಿಡಬೇಕೇ ಎನ್ನುವುದು ಆಮೇಲೆ. ಇಂದಿನ ಅಜೆಂಡಾದಲ್ಲಿರುವ ಎಲ್ಲಾ ಪ್ರಸ್ತಾವಗಳನ್ನು ಮುಂದೂಡಬೇಕು.

(ಗೊಂದಲ)

ಶ್ರೀ ಬಸವರಾಜ ಎಸ್. ಬೊಮ್ಮಾಯಿ : Preliminary ಎಂದು details ಗೆ ಹೋಗುವುದು ಬೇಡ.

ಶ್ರೀ ಸಿದ್ದರಾಮಯ್ಯ : ಅವರು ಹೇಳುವಾಗ ನಾನು ಸುಮ್ಮನೆ ಕುಳಿತಿರಲಿಲ್ಲವೇ?

ಶ್ರೀ ಜಗದೀಶ್ ಶೆಟ್ಟರ್ : Discussion ಮಾಡಿ ಎಂದು ನಾವು ಹೇಳಿದ್ದೇವೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, No, it is not correct. Please allow me to make preliminary submission.

ಶ್ರೀ ಬಸವರಾಜ್ ಬೊಮ್ಮಾಯಿ : ಈಗಲೇ ಅವರು ಪ್ರಿಲಿಮಿನರಿ ಎಂದು ಹೇಳಿ ಡಿಟೇಲ್‌ಗೆ ಹೋದರೆ ಹೇಗೆ? ಡಿಟೇಲ್‌ಗೆ ಈಗ ಅವಕಾಶ ಕೊಡಬಾರದು.

(ಗೊಂದಲ)

ಅಧ್ಯಕ್ಷರು : ಎರಡು ನಿಮಿಷದಲ್ಲಿ ಮುಗಿಸಿ.

ಶ್ರೀ ಸಿದ್ದರಾಮಯ್ಯ : ಎರಡು ನಿಮಿಷದಲ್ಲಿ ಮುಗಿಸುತ್ತೇನೆ. ನಾನು ಮಾತನಾಡಿದರೆ ರೈಸ್ ಆಗುತ್ತಿರಿ.

(ಗೊಂದಲ)

ಶ್ರೀ ಡಿ.ಕೆ.ಶಿವಕುಮಾರ್ : ಅವರಿಗೂ ನಿಮಗೂ ಹೌಸ್ ಪ್ರೊಸಿಡಿಂಗ್ಸ್ ಬಗ್ಗೆ ಎಷ್ಟು ವರ್ಷದಿಂದ ಗೊತ್ತಿದೆ ಎಂದು ಹೇಳಿದಿರಿ. ನಾವು 71 ಜನ ಶಾಸಕರುಗಳು ಸಹಿ ಹಾಕಿ ಈ ವಿಚಾರ ಎಮರ್ಜೆನ್ಸಿ ಇದೆ, ಮಾತನಾಡುವುದಕ್ಕೂ ನೀವು ಬಿಡುತ್ತಿಲ್ಲವಲ್ಲ? Why are you blocking us? We are trying to convince Hon'ble Speaker.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ರೂಲ್‌ನಲ್ಲಿ ಚರ್ಚೆ ಮಾಡಿ ಎಂದು ನಾವು ಹೇಳುತ್ತಿದ್ದೇವೆ, ಬೇಡವೆಂದು ಹೇಳುತ್ತಿಲ್ಲ.

(ಗೊಂದಲ)

ಶ್ರೀ ಡಿ.ಕೆ.ಶಿವಕುಮಾರ್ : we are trying to convince Hon'ble Speaker. ನಿಮಗೆ convince ಮಾಡುವ ಅವಶ್ಯಕತೆ ಇಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : You are debating.

ಶ್ರೀ ಡಿ.ಕೆ. ಶಿವಕುಮಾರ್ : No, we are not debating.

(ಗೊಂದಲ)

ಶ್ರೀ ಬಸವರಾಜ್ ಬೊಮ್ಮಾಯಿ : That is your submission to the Hon'ble Speaker.

ಶ್ರೀ ಡಿ.ಕೆ.ಶಿವಕುಮಾರ್ : You are already influencing the Government. The Government is influencing the Speaker.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಈಗ Question Hour ಇದೆ. ನಿನ್ನೆ ನಿಮ್ಮ ಸದಸ್ಯರು ಸದನದ ಬಾವಿಗೆ ಬಂದಿದ್ದರು.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್ : ಸ್ವಾಮಿ, ಬಸವರಾಜ ಬೊಮ್ಮಾಯಿ ಯವರು ರೂಲ್ 69ನಲ್ಲಿ ತೆಗೆದುಕೊಳ್ಳಿ ಎಂದು ನಿಮಗೆ influence ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಬಸವರಾಜ್ ಬೊಮ್ಮಾಯಿ : ನಾನು influence ಮಾಡುತ್ತಿಲ್ಲ. ನಾನು ಈ ರೂಲ್ ಪುಸ್ತಕದಲ್ಲಿರುವ ಪೊಸಿಷನ್ ಹೇಳಿದ್ದೇನೆ. ನಿಯಮ 60ರಡಿಯಲ್ಲಿ ಇದು ಬರುವುದಿಲ್ಲ.

ಶ್ರೀ ಸಿದ್ದರಾಮಯ್ಯ : Let him argue that it may be converted into Rule 69. My point is that it comes under Rule 60.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : ನಿಯಮದಲ್ಲಿ "ನಿಲುವಳಿ ಸೂಚನೆಯು ಭಾರತದ ಯಾವುದೇ ಭಾಗದಲ್ಲಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ನ್ಯಾಯಾಲಯದ ಮುಂದೆ ವಿಚಾರಣೆಯಲ್ಲಿರುವ ಯಾವುದೇ ವಿಷಯಕ್ಕೆ ಸಂಬಂಧಿಸಿರತಕ್ಕದ್ದಲ್ಲ." ಎಂದು ಇದೆ. ನಾನು ರೂಲ್ಸ್ ಅನ್ನೇ quote ಮಾಡುತ್ತಿದ್ದೇನೆ ಸ್ವಾಮಿ, influence ಅಲ್ಲ. ನೀವು ಈ ಕಡೆ ಇದ್ದಾಗ ಏನು ಮಾಡಿದ್ದೀರೆಂದು ನಮಗೆ ಗೊತ್ತಿದೆ.

(ಗೊಂದಲ)

ಶ್ರೀ ಸಿದ್ಧರಾಮಯ್ಯ : ಏಕೆ ಹೇಳುತ್ತಿದ್ದೇನೆಂದರೆ 16,850 ಕೋಟಿ ರೂಪಾಯಿ ಮೊತ್ತ ಇದೆ. ಈ ಸರ್ಕಾರ involve ಆಗಿದೆ. ಆ ಕಾರಣಕ್ಕಾಗಿ ಮಾನ್ಯ ಯಡಿಯೂರಪ್ಪನವರು ರಾಜೀನಾಮೆ ಕೊಟ್ಟಿರುವುದು, ಆ ಕಾರಣ ಕ್ಕಾಗಿಯೇ ಇವತ್ತು ಜನಾರ್ಧನರೆಡ್ಡಿಯವರು ಜೈಲಿಗೆ ಹೋಗಿರುವುದು, ಆ ಕಾರಣಕ್ಕಾಗಿಯೇ ಇವತ್ತು ಬಹಳ ಜನ ಮಂತ್ರಿಗಳನ್ನು ಸರ್ಕಾರದಲ್ಲಿ ಕೈಬಿಟ್ಟಿರುವುದು, after the submission of this report. 16,850 ಕೋಟಿ ರೂಪಾಯಿ. CEC ಹೇಳಿದೆ, The Central Empowered Committee of the Supreme Court made it very clear. ಅದನ್ನೇ ಕೋರ್ಟ್‌ನಲ್ಲಿ ಫಾಲೋ ಮಾಡಿದ್ದಾರೆ. ಲೋಕಾಯುಕ್ತರು ಅದರ ಐದು ಪಟ್ಟು ವಸೂಲು ಮಾಡಿ ಎಂದು ಹೇಳಿದ್ದಾರೆ. That means to say, ಸುಮಾರು ಒಂದು ಲಕ್ಷ ಕೋಟಿ ರೂಪಾಯಿಗಳನ್ನು, 744 ಅಧಿಕಾರಿಗಳು, ಯಾರ್ಯಾರು ರಾಜಕಾರಣಿ ಗಳು ಸೇರಿದ್ದಾರೆ, ಅವರು ಮಾನ್ಯ ಯಡಿಯೂರಪ್ಪನವರು ಇರಬಹುದು, ಅಥವಾ ಬೇರೆ ಮಂತ್ರಿಗಳು ಇರಬಹುದು, JMC ಕಂಪನಿ ಇರಬಹುದು, ಓಬಳಾಪುರಂ ಮೈನಿಂಗ್ ಕಂಪನಿ ಇರಬಹುದು, ಜನಾರ್ಧನರೆಡ್ಡಿ ಇರಬಹುದು, ಯಾರಾದರೂ ಇರಬಹುದು.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : ಈ ತರಹ ಹೆಸರುಗಳನ್ನು ಹೇಳಿ...

(ಗೊಂದಲ)

ಅಧ್ಯಕ್ಷರು : ಪ್ಲೀಸ್, ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು : ಪ್ಲೀಸ್, ದಯವಿಟ್ಟು ಕುಳಿತುಕೊಳ್ಳಿ ಚರ್ಚೆ ಮಾಡೋಣ.

(ಗೊಂದಲ)

ಅಧ್ಯಕ್ಷರು : ಎಲ್ಲರೂ ಈ ರೀತಿ ನಿಂತುಕೊಂಡರೆ ಹೇಗೆ?

(ಗೊಂದಲ)

ಅಧ್ಯಕ್ಷರು : ಸಚೇತಕರೆ, ಎಲ್ಲರನ್ನೂ ಕೂರಿಸಿ.

(ಗೊಂದಲ)

ಅಧ್ಯಕ್ಷರು : ಪ್ಲೀಸ್ ಕುಳಿತುಕೊಳ್ಳಿ. ಕುಳಿತುಕೊಳ್ಳಿ. ಪ್ಲೀಸ್ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ.ರಮಾನಾಥ್ ರೈ: ಅಧ್ಯಕ್ಷರೆ, ನೀವು ಎದ್ದು ನಿಂತರೂ ಕೂಡ ನೋಡಿ ಹೇಗೆ ನಿಂತು ಕೊಂಡಿದ್ದಾರೆ? ಅವರಿಗೆ ಹೇಳಿ.

(ಗೊಂದಲ)

ಅಧ್ಯಕ್ಷರು : ಒಂದು ನಿಮಿಷ ಕುಳಿತುಕೊಳ್ಳಿ. I will decide.

(ಗೊಂದಲ)

ಅಧ್ಯಕ್ಷರು : please...

(ಗೊಂದಲ)

ಅಧ್ಯಕ್ಷರು : ಹೀಗೆ allegation ಮಾಡಿದರೆ ಹೇಗೆ?

(ಗೊಂದಲ)

ಶ್ರೀ ಸಿದ್ದರಾಮಯ್ಯ : ಎಲ್ಲರದ್ದೂ ಸೇರಿಸಿ CBI enquiry ಗೆ ಕೊಡಿ. ಯಾರ್ಯಾರದ್ದು ಇದೆ ಎಲ್ಲರದ್ದೂ ಸೇರಿಸಿ ಕೊಡಿ.

(ಗೊಂದಲ)

ಅಧ್ಯಕ್ಷರು : 69 ಕ್ಕೆ convert ಮಾಡಿದ್ದೇನೆ.

(ಗೊಂದಲ)

ಶ್ರೀ ಎಂ.ಪಿ. ರೇಣುಕಾಚಾರ್ಯ : ಧರ್ಮಸಿಂಗ್ 23 ಕೋಟಿ ಕಟ್ಟಿ ಎಂದು ಕೋರ್ಟ್ ಆದೇಶ ಮಾಡಿದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಆದ್ದರಿಂದ, ಇವತ್ತು ಯಾರ್ಯಾರು ಕದ್ದಿದ್ದಾರೆ, ಯಾರ್ಯಾರು involve ಆಗಿದ್ದಾರೆ, ಅವರಿಗೆ ಜೈಲು ಆಗಬೇಕು, ಶಿಕ್ಷೆ ಆಗಬೇಕು.

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಮಗೆ ಇದನ್ನು ಚರ್ಚೆ ಮಾಡುವುದಕ್ಕೆ ರೂಲ್ 60 ನಲ್ಲಿ ಅನುಮತಿ ಕೊಡಬೇಕು. ಇವತ್ತಿನ ಅಜೆಂಡಾದಲ್ಲಿರುವುದನ್ನೆಲ್ಲಾ ಮುಂದೂಡಬೇಕು.

(ಗೊಂದಲ)

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರರು ಲೋಕಾಯುಕ್ತ ವರದಿ ಬಗ್ಗೆ ಚರ್ಚೆ ಮಾಡಬೇಕೆಂದು ನಿಯಮ 60ರ ಅಡಿಯಲ್ಲಿ ಪ್ರಸ್ತಾಪಿಸಿರುತ್ತಾರೆ. ಸರ್ಕಾರದ ವತಿಯಿಂದ ಈ ವಿಷಯವು

ನಿಲುವಳಿ ಸೂಚನೆಯ ವ್ಯಾಪ್ತಿಗೆ ಬರುವುದಿಲ್ಲವೆಂದು ತಿಳಿಸಿದ್ದಾರೆ. ಎಲ್ಲವನ್ನೂ ಪರಿಶೀಲಿಸಿ, ವಿಷಯವು ಇತ್ತೀಚಿನ ಯಾವುದೇ ಘಟನೆಯಾಗಿಲ್ಲದೇ ಇರುವುದರಿಂದ, ಸಾರ್ವಜನಿಕವಾಗಿ ಒಂದಿಷ್ಟು ವಿಚಾರವಿರುವುದರಿಂದ ಇದನ್ನು ನಿಯಮ 60 ರ ಬದಲಾಗಿ 69 ರ ಅಡಿಯಲ್ಲಿ ಚರ್ಚೆಗೆ ಅವಕಾಶ ಮಾಡಿ ಕೊಡುತ್ತೇನೆ. ಪ್ರಶ್ನೋತ್ತರವಾದ ಮೇಲೆ ಈ ವಿಚಾರ ತೆಗೆದು ಕೊಳ್ಳೋಣ.

(ಗೊಂದಲ)

ಅಧ್ಯಕ್ಷರು : ಪ್ರಶ್ನೋತ್ತರವಾದ ಮೇಲೆ ಇದನ್ನು ತೆಗೆದುಕೊಳ್ಳುತ್ತೇವೆ.

(ಗೊಂದಲ)

ಶ್ರೀ ಎ.ಎಸ್.ಪಾಟೀಲ್ (ನಡಹಳ್ಳಿ) : ಪ್ರಶ್ನೋತ್ತರ ಮುಗಿದ ಮೇಲೆ ಕೃಷ್ಣಾ ನದಿ ನೀರಿನ ಸಮಸ್ಯೆಯ ಬಗ್ಗೆ ದಯವಿಟ್ಟು ಚರ್ಚೆಗೆ ಅವಕಾಶ ಕೊಡಬೇಕು.

ಅಧ್ಯಕ್ಷರು : ಆಯಿತು ಈಗ ಪ್ರಶ್ನೋತ್ತರ.

(ಗೊಂದಲ)

ಶ್ರೀ ಶ್ರೀಕಾಂತ ಕುಲಕರ್ಣಿ : ಮಾನ್ಯ ಅಧ್ಯಕ್ಷರೆ, ಪ್ರಶ್ನೋತ್ತರ ನಂತರ ಕೃಷ್ಣಾ ನದಿ ನೀರಿನ ಬಗ್ಗೆ ತಾವು ಕೊಟ್ಟಿರುವ ಮಾತಿನ ಪ್ರಕಾರ ಚರ್ಚೆ ಮಾಡುವುದಕ್ಕೆ ದಯವಿಟ್ಟು ಅವಕಾಶ ಕೊಡಬೇಕು.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್ : ಸ್ಟೇಟ್‌ಮೆಂಟ್ ಮಾಡಿಸಿ.

ಅಧ್ಯಕ್ಷರು : ಮುಖ್ಯಮಂತ್ರಿಗಳು ಬರಲಿ. ಆಯಿತು. ಎರಡನ್ನೂ ತೆಗೆದುಕೊಳ್ಳೋಣ. ಈಗ ಪ್ರಶ್ನೋತ್ತರ. ಕೆ.ಎಂ.ಶಿವಲಿಂಗೇಗೌಡರು.

2. ಪ್ರಶ್ನೋತ್ತರ :

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಸೀಮೆಎಣ್ಣೆ ವಿತರಣೆಗೆ ಬಗ್ಗೆ

106 (1138) ಶ್ರೀ ಶಿವಲಿಂಗೇಗೌಡ ಕೆ.ಎಂ. (ಅರಸೀಕೆರೆ) : ಮಾನ್ಯ ಇಂಧನ ಮತ್ತು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?